# <u>ಅಕ್ಕಮಹಾದೇವಿಯವರ ವಚನದ ಪದಗಳ</u>

## ಅರ್ಥಅರ್ಥಕೋಶ ಮತ್ತು ವಿಶೇಷ ಪದಸೂಚಿ

ಅಂಗ-ರೀತಿ

ಅಗುಸೆ-ಊರುಬಾಗಿಲು

ಅಗ್ಗವಣಿ-ನೀರು

ಅಚ್ಚುಗ-ಆಶ್ಚರ್ಯಕರ, ಅದ್ಭುತ

ಅಂಚೆ-ಹಂಸೆ

ಅಜ-ಬ್ರಹ್ಮ

ಅಡಗು-ಮಾಂಸ

ಅಂಡುಗೊಳ್-ತಳ ಊರಿ ಸುಮ್ಮನಿರು

ಅಂದುಗೆ -ಕಾಲಿನ ಬಳೆ

ಅನ್ಯಬೋಧೆ-ಶೈವೇತರಬೋಧೆ

ಅನ್ಯಶಾಸ್ತ್ರ- ಶೈವೇತರಶಾಸ್ತ್ರ

ಅನಿಶಂ-ಸದಾ

ಅನುಭಾವ-ಸದ್ಗೋಷ್ಠಿ

ಅಭಿಸಾರಿಕೆ-ವ್ಯಭಿಚಾರಿಣಿ

ಅಮ್ಮೆ- ನಾನು ಸಮರ್ಥಳಲ್ಲ

ಅರಕೆ-ನ್ಯೂನತೆ

ಅರಗಿಲೆರೆದ ಬೊಂಬೆ- ಅರಗಿನಲ್ಲಿ ಎರಕ ಹೊಯ್ದ ಗೊಂಬೆ .

ಅರತಲ್ಲದೆ- ಇಂಗಿದಲ್ಲದೆ

ಅರಲುಗೊಳ್-ಒಣಗಿ-ಬಿರುಕುಬಿಡು

ಅರಳಿ -ಅಶ್ವತ್ಥವೃಕ್ಷ

ಅರಿ-ಅರಿ(xಮರೆ) ತಿಳಿ

ಅರಿಕೆ -ತಿಳಿವಳಿಕೆ, ಜ್ಞಾನ,

ಅರಿವು-ತಿಳಿವು

ಅರಿವು-ಆಚಾರ

ಅರಿಷಡ್ವರ್ಗ ,:೧)ಕಾಮ, ೨)ಕ್ರೋಧ ೩)ಲೋಭ, ೪)ಮೋಹ, ೫ಮದ, ೬ ಮಾತ್ಸರ್ಯ ಮುಂತಾದ ಆಂತರಂಗಿಕ ಶತ್ರು ಸಮೂಹ.

ಅರಸು - ಹುಡುಕು, ಬೆನ್ನುಹತ್ತು, ಪತ್ತೆಹಚ್ಚು

ಆರು ಹಿರಿಯರು -ಪ್ರಾಜ್ಞಂಮನ್ಯರು, ಪ್ರಬುದ್ಧರು

ಅರದು ಸಣ್ಣಿಸು-ಕೊಚ್ಚಿ ಚೂರು ಚೂರು ಮಾಡು

ಅಲಗು-ಕತ್ತಿ,

ಅಲ್ಲಯ್ಯ- ಅಲೆ ಹಿಂಸಿಸು

ಆಳವು-ಸಾಮರ್ಥ್ಯ

ಅಳಿ-ಭ್ರಮರ, ದುಂಬಿ

ಆಳಿತನ - ಕೆಟ್ಟತನ

ಅಳಿಮನ-ದುರ್ಮನ, ಕೆಟ್ಟ ಮನಸ್ಸು .

ಅಳಿವು-ನಾಶ

ಅಳಿಸಂಕುಳ-ದುಂಬಿಗಳ ಸಮೂಹ

ಅವಗವಿಸು-ಅವಗ್ರಹಿಸು, ಅನುಗ್ರಹಿಸು

ಅವಗುಣ-ದುರ್ಗುಣ, ದೋಷ

ಅವಿಮುಕ್ತ ಕ್ಷೇತ್ರ-ಕಾಶಿಯ ಬಳಿಯ

ಒಂದು ಪುಣ್ಯಕ್ಷೇತ್ರ ,

ಅಶನ-ಊಟ, ಆಹಾರ

ಅಷ್ಟಮದ-ಕುಲ-ಛಲ-ಧನ-ರೂಪ ಯೌವನ-ವಿದ್ಯಾ-ತಪ-ಐಶ್ವರ್ಯ

ಅಷ್ಟವಿಧಲಿಂಗ (ಆಚಾರಾದಿಶೂನ್ಯಾಂತ ವಾದ)

ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾ, ನಿಕಲ ನಿಃಶೂನ್ಯ (ನಿರಂಜನ) ಲಿಂಗಗಳು

ಅಷ್ಟವಿಧಾರ್ಚನೆ- ಅಕ್ಷತೆ-ಗಂಧ ಜಲ ತಾಂಬೂಲ-ದೀಪ-ಧೂಪ

ನೈವೇದ್ಯ-ಬಿಲ್ವಪತ್ರೆ .

ಅಷ್ಟಷಷ್ಠಿತೀರ್ಥ- ಕಾಶಿಯಲ್ಲಿನ ಅರವತ್ತೆಂಟು ತೀರ್ಥಗಳು

ಅಸಂಖ್ಯಾತರು-ಭಕ್ತರು, ಶರಣರು .

ಅಸಗ-ಅಗಸ

ಅಸಿ-ಕತ್ತಿ

ಅಸಿಯ ಕಲ್ಲು -ಅರೆಯುವ ,ಅಡಿಗಲ್ಲು, ರುಬ್ಬುವ ಅಡಿಗಲ್ಲು

ಅಸು-ಪ್ರಾಣ

ಅಹಂ ಮಾಹೇಶ್ವರ ಪ್ರಾಣೋ-ನಾನು ಮಾಹೇಶ್ವರನಿಗೆ ಪ್ರಾಣ, ನನಗೆ ಪ್ರಾಣ ಮಾಹೇಶ್ವನು

ಆಜ್ಞಾಶಕ್ತಿ- ಆಗಮ (ಶಿವ)

ಆಗು ಚೇಗೆ - ಸಂಪತ್ತು ವಿಪತ್ತು

ಆಣಿಕಾರರು -ತತ್ವವೇತ್ತರು.

ಆಣಿಯಾದ ಮುತ್ತು-ಲಿಂಗ

ಆತುರ-ಕಾಮಾತುರ, ಕಾಮದ ಉದ್ವೇಗ

ಆದ ರೇಖೆಯ ಬಿಡು--ಆದಿಲಿಂಗ.

ಆನಳಿದ ಕಾರಣ, ಅಹಂಭಾವ

ನಾಶವಾದುದರಿಂದ.

ಆಪ್ಯಾಯನ - ಆಪ್ಯಾಯನಿ:

ಹಸಿವು-ಹಸಿವುಳ್ಳವ,

ರುಚಿ - ರುಚಿಯುಳ್ಳವ

ಆಪ್ಯಾಯನ - ಹಸಿವು, ಅರಕೆ, ನ್ಯೂನತೆ

ಆಮಿಷ-ಮಾಂಸ,

ಪ್ರಲೋಭನಕಾರಿಯಾದ ವಸ್ತು

ಆಯತ-ನಿರತ, ಮಗ್ನ

ಆಯತ- ಸ್ವಾಯತ-ಅನುಭಾವ

ಆರಡಿಗೊಳ್-ಹಿಂಸಿಸು

ಆರು ತೆರೆಯು -ಷಡೂರ್ಮಿಗಳು

ಆರುಮಂದಿ -ಅರಿಷಡ್ವರ್ಗ

ಆರೆ - ನಾನು ಅಸಮರ್ಥಳು

ಆಲಿ-ಕಣ್ಣು, ದೃಷ್ಟಿ

ಆಲಿಕಲ್ಲಿನ ಕಂಭ- ಭಾವ

ಆಲಿಪರಿ-ತಿರುಗು, ಅಲೆ

ಆಳಿಗೊಂಡು- ಹಿಂಸಿಸಿ

ಆವಗೆ- ಕುಂಭಾದಿಗಳನ್ನು ಸುಡಲಿರುವ ಕುಂಬಾರನ ಮನೆಯ ಬೆಂಕಿಯ ಗೂಡು

ಆವಾಗಳೂ -ಯಾವಾಗಲೂ

ಅಳಿಗೊಳ್-ತೊಂದರೆಪಡಿಸು, ಪೀಡಿಸು

ಆಳು-ಭತ್ಯ

ಇಕ್ಕೆ-ನಿಲ್ದಾಣ

ಇಂಗಳ-ಬೆಂಕಿ, ಕಂಡ

ಇಂಬಪ್ಪ ಗಿರಿ-ಶಿವಭಾವ.

ಇಬ್ಬರು ಉತ್ಪತ್ತಿಸ್ಥಿತಿಗೆ ಕಾರಣರು~ ಬ್ರಹ್ಮ, ವಿಷ್ಣು

ಇಂಬು-ಅವಕಾಶ

ಇಂಬುಗೊಳ-ಒಳಗೋಳ

ಇಮ್ಮೆ-ಬಹಿರಂಗ, ಅಂತರಂಗ ಇರುಳೋಸರಿಸಿದ.

ಜಕ್ಕವಕ್ಕಿ-ರಾತ್ರಿ ಕಳೆದು ಬೆಳಗಾಗುತ್ತಲೇ ಜೋಡಿ ಕೂಡಿ ಸುಖಿಸುವ ಚಕ್ರವಾಕವೆಂಬ ಪಕ್ಷಿ.

ಇರುಹೆ- ಇರುವೆ, ಇರುಬೆ

ಇಳಿಕೆ - ಕೀಳು

ಇಷ್ಟಲಿಂಗಮವಿಶ್ವಸ್ಯ – ಇಷ್ಟಲಿಂಗವನ್ನು ಅವಿಶ್ವಾಸಿಸಿ, ಸ್ಥಾವರ (=ತೀರ್ಥ)ಲಿಂಗವನ್ನು ನಮಸ್ಕರಿಸಿದರೆ ಅವನು ನೂರು ಜನ್ಮ ಪರ್ಯತ ನಾಯಾಗಿ ಹುಟ್ಟಿ ಕೊನೆಗೆ ಚಂಡಾಲನ ಮನೆಯನ್ನು

ಸೇರುವನು.

ಈಂಟಿಸು-ಕುಡಿಸು

ಈರೇಳು -ಹದಿನಾಲ್ಕು , ಎರಡೇಳು

ಈವಂಗ - ದಾನಿಗೆ

ಉಂಗುಷ್ಠ -ಕಾಲ ಹೆಬ್ಬೆರಳು

ಉಣ್ಣದೂಟ-ಶಿವಸುಖ

ಉದ್ಗಮಶರ-ಮನ್ಮಥ.

ಉದರ-ಹೊಟ್ಟೆ,ಹೊಟ್ಟೆಪಾಡು

ಉದರಕಾರಣ ಹೊಟ್ಟೆಪಾಡಿಗಾಗಿ

ಉದ್ವಾಹ-ಮದುವೆ

ಉಪ್ಪರಿಗೆ - ಬ್ರಹ್ಮರಂಧ್ರ

ಉಪ್ಪರಿಸು -ತೆಗೆ, ಎತ್ತುಬಿಡು .

ಉಭಯ -ದ್ವಂದ್ವ

ಉಯ್ಯಲೆ-ಯೋಗ

ಉರ-ಎದೆ

ಉರುವಣೆ-ರಭಸ, ಘರ್ಷಣೆ, ತೀವ್ರತೆ

ಉರುಹು -ಸುಡು

ಉಳಿ -ತ್ಯಜಿಸು

ಉಳುಹಾಗು -ಬಿಡುಗಡೆಯಾಗು

ಉಸಿರ ಗಿಡಿ- ಕುಂಭಕಾದಿಗಳ

ಮೂಲಕ ಯೋಗ ಮಾಡು.

ಉಡು-ಉಣ್ಣಿಸು

ಊರು-ದೇಹ

ಋಣನಿಧಾನ - ತನಗೆ

ಲಭ್ಯವಾಗಬೇಕಾಗಿರುವ ನಿಧಾನ ನಿಕ್ಷೇಪ

ಎಚ್ಚರೆ-ಬಾಣ ಬಿಟ್ಟರೆ

ಎಡರು-ವಿಘ್ನ, ತೊಂದರೆ

ಎಡೆ-ಮಧ್ಯ, ನಡುಭಾಗ

ಎಡೆಗೋಲು-ಶತ್ರುವಿನ ಬಿಲ್ಲಿಂದ ಜಿಗಿದು ಮಧ್ಯಂತರದಲ್ಲಿ ಬರುತ್ತಿರುವ ಬಾಣ

ಎಡೆದರಹು - ಅಂತರ, ಭೇದ

ಎಡೆಯಾಡು - ಅಲ್ಲಿಂದಿಲ್ಲಿಗೆ,ಇಲ್ಲಿಂದಲ್ಲಿಗೆ ಅಡ್ಡಾಡು

ಎರಡು - ಭಿನ್ನತೆ, ಚಾಂಚಲ್ಯ, ನಿಷ್ಠಾಹೀನತೆ

ಎರದ ಮುಳ್ಳು-ನೋಡಲು ನುಣ್ಣಗಿರುವ ಎರದೆಲೆಯ ತಳ ಭಾಗದ ಮುಳ್ಳು

ಎರೆ – ಎರೆ ಎಂಬ ಕಪ್ಪುಮಣ್ಣು

ಎಳವೆಳುದಿಂಗಳು -ಬಾಲಚಂದ ಬೆಳದಿಂಗಳು

ಎಳಸು - ಆಶಿಸು

ಎಸುಗೆ - ಬಾಣದ ಪ್ರಯೋಗ

ಏಕನಾಥ- ಏಕನಾಥನೆಂಬ ವಿನಾಯಕ

ಏರು-ಗಾಯ, ತರಚುವಿಕೆ, ಮಾಂಸ ಕಾಣುವಂತೆ ಚರ್ಮ ಕೀಳುವಿಕೆ

ಏಲೇಶ್ವರ- ಆ ಹೆಸರಿನ ದೇವರು ಮತ್ತು ಆ ದೇವರಿರುವ ಕ್ಷೇತ್ರ (ಬಹುಶಃ ಶ್ರೀಶೈಲದಲ್ಲಿರುವುದು.)

ಏವೆ – ಏನು ಮಾಡಲಿ, ಇನ್ನೇನು ಗತಿ .

ಐಕ್ಯ – ಆರೂಢಸ್ಥಲ

ಐದು ಪರಿಯ ಬಣ್ಣ- ಪಂಚಭೂತ.

ಐಮುಖ - ಪಂಚಮುಖನಾದ ಶಿವ.

ಐವರು - ಪಂಚೇಂದ್ರಿಯಗಳು

ಒಕ್ಕ ಪ್ರಸಾದ- ಉಚ್ಚಿಷ್ಟ ಪ್ರಸಾದ

ಒಕ್ಕುದು -ಬಿಟ್ಟಿದ್ದು, ಚೆಲ್ಲಿದುದು, ಎಂಜಲು,ಪ್ರಸಾದ .

ಒಗತನ – ಸಂಸಾರ, ಬಾಳುವೆ.

ಒಜ್ಜರಿಸು - ಸ್ರವಿಸು, ಪ್ರವಹಿಸು .

ಒಟ್ಟಯಿಸು-ಒಟ್ಟುಗೂಡು.

ಒಡೆ-ಒಡಕು, ಮುಕ್ಕಾದ, ಮಣ್ಣಿನ ಪಾತ್ರ .

ಒಪ್ಪಚ್ಚಿ- ಸ್ವಲ್ಪ ಹೊತ್ತು, ಒಂದು ಹೊತ್ತು.

ಒಪ್ಪದ ಚೀಟಿ - ಪ್ರಾರಬ್ಧ ಲಿಖಿತ.

ಒಂಬತ್ತು ಛಿದ್ರ- ನವನಾಳ.

ಒಮ್ಮನ-ಒಂದು ಮಾನದಷ್ಟು ದವಸಧಾನ್ಯ, ದವಸಧಾನ್ಯಗಳನ್ನು ಅಳೆಯುವ ಒಂದು ಮೂಲಮಾನ

ಒರೆ- ಸಮ .

ಒಲೆ- ನಿವಾಳಿದೆಗೆ, ಒಲೆದಾಡಿಸು

ಒಳಗು-ತಿರುಳು .

ಒಳ (=ು ಗುಂದಧರಿಸಿನ - ಒಳಗುಂದ ಎಂಬ ಊರಿನ ಪ್ರಸಿದ್ಧವಾದ ಅರಿಸಿನ,

ಒಳಯಿಕೆ- ಅಂತರಂಗಕ್ಕೆ.

ಒಳಯಿಂಕೆ-ಒಳಕ್ಕೆ .

ಒಸರು-ಜಿನುಗು

ಓಗರ ×ಪ್ರಸಾದ .

ಓಗರದ ಉದಕ-ಅನ್ನದ ರುಚಿರಸ

ಓತು- ಪ್ರೀತಿಸಿ.

ಓಂ ನಮಶ್ಶಿವಾಯೇತಿ--ಓಂ ನಮಶಿವಾಯ ಎನ್ನುತ್ತ ಯಾರು ವಿಭೂತಿ ತ್ರಿಪುಂಡ್ರವನ್ನು ಧರಿಸುವರೋ ಅವರ ಏಳು

ಜನ್ಮಗಳಲ್ಲಿ ಮಾಡಿದ ಪಾಪಗಳೂ ತತ್ಕ್ಷಣವೇ ನಾಶವಾಗುವವು

ಒರೆ ಪಶು-ಕರವ ಹಸು

ಒಲೆ-ಒಲೆಯ ಪುಸ್ತಕ

ಒಸರಿಸು-ಒಲು

ಕಟ್ಟಿಹಾದ -ಒಣಗಿ ಕಟ್ಟರೆಯಾದ

ಕಡಲು ಸಮುದ್ರ.

ಕಡೆಗೆ ಮಾಡದ -ಕೊನೆಮುಟ್ಟ ಮಾಡದ, ಸಾಂಗವಾಗಿ ನೆರವೇರಿಸದ .

ಕರ್ತೃ-ಒಡೆಯ, ಕರ್ತೃxನಭೃತ್ಯ .

ಕಂತಿ (ಶ್ರವಣ)-ಜೈನಸನ್ಯಾಸಿನಿ

ಜೈನ ಸನ್ಯಾಸಿ

ಕಂತಿ-ಜೈನಸನ್ಯಾಸಿನಿ

ಕರ್ತೃಭೃತ್ವತ್ವ-ಸ್ವಾಮಿ-ಕಿಕಕರ

ಸಂಬಂಧ ಅಥವಾ ಭಾವ

ಕದಳಿ ಐಕ್ಯಸ್ಥಾನ (೧) ದೇಹವಿಷಯಾದಿಗಳು, (೨)

ಶ್ರೀಶೈಲದ ಬಾಳೆಯವನ ಕದಳಿಯ ಬನ.

ಕನಸಿನ ಸುಖ -ಸುಜ್ಞಾನ

ಕನ್ನೆಯರೈವರು -ಪಂಚಕಲೆಗಳು.

ಕಬ್ಬುನ -ಕಬ್ಬಿಣ

ಕಂಭ-ದೃಢಬುದ್ಧಿ

ಕರ್ಮೇಂದ್ರಿಯ-ಕೈ-ಕಾಲು-ಪಾಯು, ಗುಹ್ಯ, ವಾಕ್

ಕರ-ಕೈ

ಕಲಗು (೧) ಮೃದುಮಾತು, ಕಾರ್ಯದಿಂದ ಪೇಶಲವಾಗು, (೨)ಆದ್ರ್ರವಾಗು,
ದಯಾಮಯವಾಗು.

ಕರಣ -ಇಂದ್ರಿಯ

ಕರಕರೆ -ಸಂಸಾರ ತಾಪತ್ರಯ

ಕರಿಗೊಳ್-ಗಟ್ಟಿಯಾಗು.

ಘನೀಭವಿಸು, ಸಾಂದ್ರವಾಗು

ಕರು -ಎರಕ

ಕರುಣ–ಈ ಪಾಠ ಕರುಣಾಮೃತ ಎಂದಿರಬಹುದು, 'ಕರುಣವೆಂಬ ಹಾಲು' ಎಂದರ್ಥ [ಆಗ ಈ ವಚನದಲ್ಲಿ ಬರುವ ತ್ರಿವಿಧಾಮೃತ ಎಂಬ ಮಾತು ಹೊಂದಿಕೊಂಡು ಹಾಲು-ತುಪ್ಪ-ಸಕ್ಕರೆ ಎಂಬುದ ತ್ರಿವಿಧ ಅಮೃತವಾಗುವುದು).

ಕರುವಿಡು-ಎರಕಹೊಯ್ಯಿ .

ಕರುವಿನ ರೂ ಎರಕದ (ಮಾನವ) ಪ್ರತಿಮೆ

ಕಲಿ-ವೀರ, ಕಲಿ x ಹಂದೆ

ಕಳ-ಕಣ, ಯುದ್ದರಂಗ

ಕಳತ್ರ-ಹೆಂಡತಿ

ಕಳಿಲೆ -ಬಿದಿರಿನ ಮೊಳಕ

ಕಳವೆ-ಭತ್ತ

ಕಳನೇರಿ -ಯುದ್ದರಂಗವನ್ನುಪ್ರವೇಶಿಸಿ .

ಕಳನೇರಿ ಕೈಮರ -ಯುದ್ದರಂಗವನ್ನು ಪ್ರವೇಶಿಸಿ

ಬಾಣಬಿಡುವುದನ್ನು ಮರೆ

ಕಳಿಯಿರಿ - ಕಳವಂ(?) ಕಳವಳಿಸು

ಕಳಿವರಿ-ಕಳವಳಿಸು

ಕವಿ –ತೂರು, ತುಂಬು

ಕಸಬಗೇರಿ-ಕಟುಗರ ಬೀದಿ

ಜ್ಞಾನ-ಕರ್ಮ.ಜ್ಞಾನ-ಮನ-ಬುದ್ಧಿ-ಚಿತ್ತ-ಅಹಂಕಾರ.

ಜ್ಞಾನೇಂದ್ರಿಯ -ಕಣ್ಣು ಕಿವಿ.

ಮುಂತಾದ ಐದು .

ಕಾಮನ ಮುದ್ರೆ- ಸ್ತನ ಮುಂತಾದ ಕಾಮಪ್ರೇರಕ ಅಂಗೋಪಾಂಗ .

ಕಾಕಪ್ಪೆ-ಹಾಳಾಗುವ ಕಾಯ -ಪ್ರಾಣ- ಜ್ಞಾನ ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದಗಳು.

ಕಾಯ-ದೇಹ

ಕಾಯಕ-ದೇಹದ ಕುತ್ಸಿತ ಗುಣ.

ಕಾಯಿ-ಕಾಪಾಡು, ಕಾಯಿ ×ಕೊಲ್ಲು

ಕಾಲ-ಯಮ

ಕಿಚ್ಚು -ಬೆಂಕಿ, ಕೆಂಡ

ಕಿತ-ತಪ್ಪು, ಅಪರಾಧ

ಕಿನ್ನರ-ಕಿನ್ನರಿ ಬ್ರಹ್ಮಯ್ಯ

ಕಿರಿವುಳ್ಳ-ಕಿರುವಳ್ಳ, ಕ್ಷುದ್ರವಾದ ನೀರಿನ ಗುಂಡಿ .

ಕ್ರೀ-ಕ್ರಿಯೆ

ಕ್ರೀಡೆ-ಕೀಟ, ಹುಳು

ಕುಕ್ಕುಟ-ಕೋಳಿ

ಕುಂಜರ - ಆನೆ

ಕುಂಟಣಿ -ತಲೆಹಿಡುಕಿ

ಕುಂಭಿನಿದೈವ-ನಾಡಿನ ಕುದ್ರುದೈವ

ಕ್ಷುಧೆ -ಹಸಿವು

ಕುರುಳು-ಕೂದಲು

`ಕುರುಹು-ಕಲೆ, ಚಿಹ್ನೆ

ಕುಲಸ್ತ್ರೀ, ಸತಿ, ಧರ್ಮಪತ್ನಿ, ಕುಲಸ್ತ್ರೀ x ಭೋಗಸೀ

ಕೂಟ-ಸಂಗಮ.

ಕೂಪರ್-ಪ್ರಿಯರು, ಪ್ರೀತಿಸುವವರು

ಕೂರುಮ-ಕೂರ್ಮ, ಆಮೆ.

ಕೆಡಹು-ಕಡವು, ಕೆಳಗೆ ನೂಕು .

ಕೇದಾರ-

ಕೇದಾರಕ್ಕೋದಕೇ-ಕೇದಾರದ ನೀರನ್ನು ಕುಡಿದರೆ, ಕಾಶಿಯಲ್ಲಿ ಸತ್ತರೆ, ಶ್ರೀಶೈಲದ ಶಿಖರವನ್ನು ನೋಡಿದರೆ ಪುನರ್ಜನ್ಮವಿಲ್ಲ.

ಕೆಮ್ಮನೆ –ವೃಥಾ .

ಕೆಯ್ಯ-ಹೊಲವನ್ನು

ಕೈದಾರ-ಕಂಕಣ

ಕೊಟ್ಟಣ ಕುಟ್ಟು- ಭತ್ತವನ್ನು ಕುಟ್ಟು.

ಕೊಡಿತನ -ಕೋಡಿತನ, ಮಾನಹೀನತೆ .

ಕೊರವಿ- ಕೊರವಂಜಿ, ಕೊರವಜ್ಜಿ.

ಕೊಳಗ-ಧಾನ್ಯಾದಿಗಳನ್ನು ಅಳೆಯುವ ಒಂದುಮೂಲಮಾನ

ಕೋಡಗ~ ಕೋತಿ

ಕೋಣೆಯೆಂಟು-ಅಷ್ಟಚಕ್ರಗಳು.

ಕೋಲ ತುದಿಯ ಕೋಡಗ- ಕೋಲಿನ ತುದಿಗೆ ದಾರದಿಂದ ಕಟ್ಟಿ ಆಡಿಸುವ ಕೋತಿ .

ಕೋವಿದ-ಜಾಣ, ವಿದ್ವಾಂಸ

ಖಗ-ಪಕ್ಷಿ

ಗಗನಗಿರಿ -ಶ್ರೀಶೈಲ

ಗಗನಾಪುರದ ನಾನಾಮಹಂತ .

ಗಂಗಳ-ಊಟದ ತಟ್ಟೆ, ತಳಿಗೆ.

ಗಡಣ-ಗುಂಪು, ಸಮೂಹ

ಗರತಿ-ಜೀವ.

ಗರಿದೋರದಂತೆ ನಡು-ಬಾಣದ ಕೊನೆಗೆ ಕಟ್ಟಿರುವ ಗರಿಯು ಕಾಣದಷ್ಟು ಆಳವಾಗಿ ಆ ಬಾಣವು ಮೈಯೊಳಗೆ ಹೂಳೆಹೋಗುವಂತೆ ನಾಟುವುದು.

ಗರುವ-ದೊಡ್ಡವ, ಶ್ರೇಷ್ಠ .

ಗಹ್ವರ-ಗುಹೆ ದಟ್ಟವಾದ ಕಾಡು .

ಗುಂಜಿಯಧಿಕ - ಒಂದು ಗುಲಗಂಜಿಯ ಕಾಳಿನ ತೂಕದಷ್ಟು ಹೆಚ್ಚು.

ಗುಂಡು-ಕಲ್ಗಂಡು, ಕಗ್ಗಲ್ಲ ಗುಂಡು.

ಗುಣತ್ರಯ -ಸತ್ವ-ರಜ-ತಮ .

ಗುಂಪು-ಗುಣು ಆಳ, ಅಗಾಧತೆ .

ಗುಳ್ಳೆ-ಜಲಚರವಿಶೇಷ .

ಗೊಂತ<ಗೊತ್ತು, ಗುರಿ

ಗೊತ್ತು –ವಿಶ್ರಮಸ್ಥಾನ .

ಗೊರವ ಸನ್ಯಾಸಿ, ಗುರು .

ಘನ-ದೊಡ್ಡದು, ಘನ× ಕಿರಿದು .

ಚತುರ್ವಿಧ ಪದವಿ-ಸಾಮೀಪ್ಯ - ಸಾಲೋಕ್ಯ - ಸಾರೂಪ್ಯ- ಸಾಯುಜ್ಯ .

ಚಂದನ-ಶ್ರೀಗಂಧ(ದ ಕೊರಡು)

ಚರ - ಜಂಗಮ

ಚರಲಿಂಗ - ಜಂಗಮ ಲಿಂಗ

ಸ್ಥಾವರ ಲಿಂಗxಜಂಗಮಲಿಂಗ .

ಚುಳುಕು>ಚುಲುಕ, ಅಂಗೈ ಅಂಗೈಯಲ್ಲಿ ಅಡಗುವಷ್ಟು

ಸಂಗ್ರಹರೂಪ .

ಚೋಹ-ವೇಷ

ಜಂಗುಳಿ - ಸಮಾಜ, ಜ(=ದ)ನದ ಹಿಂಡು

ಜಗುಳಿಕೆ -ಅಪಸರಣ, ಒಸರಿಸುವಿಕೆ

ಜಂಜಡ-ಜಾಡ್ಯ, ಬಂಧನ .

ಜಜ್ಜರಿಸಿ-ಜರ್ಝರಿತವಾಗಿ, ಕೋರೈಸಿ

ಜರಿಜರಿದು -ಕುಸಿಕುಸಿದು .

ಜರೆ-ಮುಪ್ಪು .

ಜವ-ಯಮ

ಜಲಕ್ಕೆ ಕನ್ನವನಿಕ್ಕಿ- [ಮರಳು]

ನೆಲವನ್ನು ತೋಡಿ.

ಜವ್ವನ -ಯೌವ್ವನ, ಹರೆಯ

ಜಾಲಗಾರ-ಬಲೆ ಬೀಸುವ ಬೆಸ್ತ

ಜೀವದೆರೆಯ -ಪ್ರಾಣದೊಡೆಯ.

ಜೋತಸಿದ್ದಯ್ಯ – ಒಂದು ದೇವರ ಹೆಸರು

ಜೋಗಿ ×ಜೋಗಿಣಿ

ಝುಳವಟ್ಟಿಗೆ -ಒಂದು ಆಭರಣವಿಶೇಷ

ಟೊಣ್ಣೆ-ತಿವಿ, ಘಾತಿಸು .

ಠಾವು -ಸ್ಥಾನ, ಜಾಗ

ಡಾಳಕ- ವಂಚಕ

ತನ್ನ ತಾನಹ ಕಾಲ-ತನಗೆ ತಾನೆ ಆಗುವ ಕಾಲ.

ಕಾಲಲಬ್ಧ ತನು-ಮನ- ಗುರು-ಲಿಂಗ- ತಾಪತ್ರಯ – ಆಧಿದೈವಿಕ ಜಂಗಮ ಶುದ್ಧ-ಸಿದ್ಧ-ಪ್ರಸಿದ್ಧ ರೂಪ-ರುಚಿ-ತೃಪ್ತಿ ಇಷ್ಟ-ಪ್ರಾಣ~ ಭಾವ .

ತನುಗುಣಗಣಾಭ್ರ... ಪವಮಾನ ತನಸಂಬಂಧವಾದ ಗುಣಗಳೆಂಬ ಮೋಡಗಳನ್ನು ಚದುರಿಸುವ ಬಿರುಗಾಳಿ .

ತನುತ್ರಯ - ಸ್ಥೂಲ-ಸೂಕ್ಷ್ಮ-ಕಾರಣ |

ತಪ್ಪು - ಅಪರಾಧ ಮಾಡು .

ತಳವೆಳಗು ಮಾಡು-ಪಾರದರ್ಶಕವಾಗುವಂತೆ ಮಾಡು, ಕಳ ಬೆಳಕಾಗುವಂತೆ ಮಾಡು

ತಳಿತಲ್ಲದೆ -ಚಿಗುರಿಲ್ಲದೆ

ತಳವಾರ (ನೆಲ)

ತವಕಿಗ –ಉತ್ಸಾಹಿ

ತವೆ -ಚೆನ್ನಾಗಿ, ಸಂಪೂರ್ಣವಾಗಿ .

ತಾರ್ಕಣೆ- ಸಾಮ್ಯ, ಸಾಕ್ಷಿ, ರುಜುವಾತು .

ತಾರ್ಕಣೆ-ಹೊಂದಿಕೆ.-

ತಾರಗಿರಿ-ರಜತಗಿರಿ, ಕೈಲಾಸಪರ್ವತ

ತಾರಾಪಥ (೧) ಆಕಾಶ, (೨) ಆತ್ಮ

ತಾಳಹಣ್ಣು, -ತಾಳೆಯ ಹಣ್ಣು, ತಾಟಿನುಂಗು .

ತಿಗುರು-ಲೇಪನ .

ತಿಂಥಿಣಿ - ಸಮೂಹ .

ತ್ರಿದಶವಧೂಕದಂಬ -

ದೇವಕನ್ಯೆಯರ ಗುಂಪು .

ತ್ರಿಪುರಾಂತಕ - ಒಂದು ದೇವರ

ಹೆಸರು, ಮತ್ತು ಶ್ರೀಶೈಲದಲ್ಲಿನ ಶಿವದೇವರು .

ಶಿಲ-ಎಳ್ಳು.

ತ್ರಿವಿಧ - ಗುರು-ಲಿಂಗ-ಜಂಗಮ

ತ್ರಿವಿಧಲಿಂಗ-ಇಷ್ಟ ಪ್ರಾಣ-ಭಾವಲಿಂಗಗಳು

ತ್ರಿವಿಧಾಮೃತ-ಹಾಲು-ತುಪ್ಪ-ಸಕ್ಕರೆ, ಇಲ್ಲಿ ಅಸಂಖ್ಯಾತರ ಕರುಣವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆ .

ತಿಸುಳ < ತ್ರಿಶೂಲ

ತುಷ-ಹೊಟ್ಟು, ಗೊಳಲು

ತುರ್ಯ - ಸಂಭಾಷಣೆ.

ತುರ್ಯಾವಸ್ಥೆ -ವಿರಹಿಯ ದಶಾವಸ್ಥೆಗಳಲ್ಲಿ ನಾಲ್ಕನೆಯ ಅವಸ್ಥೆ

ತೂರುವಾರುವನ್ನಬರ -ಧಾನ್ಯಾದಿಗಳನ್ನಂತೆ ತೂರುವ ಮುಂತಾದ ಶೋಧನ ಕ್ರಿಯೆಗಳನ್ನು ಮಾಡುವಷ್ಟರಲ್ಲಿ

ತೆತ್ತಿಗ-ಹೆಣ್ಣನ್ನು ಕೊಡುವವ, ಕನ್ಯಾಪಿತೃ.

ತೆರಣಿಯ ಹುಳು – ರೇಷ್ಮೆ ಹುಳು .

ತೆರಹಿಲ್ಲದಿಪ್ಪೊಡೆ - ಅವಿರಳವಾಗಿ ವ್ಯಾಪಿಯಾಗಿರುವಲ್ಲಿ,

ತೆರಹು - ಅಂತರ. ಅವಕಾಶ ತೆರೆ ಶುಲ್ಕ .

ತೆರೆ - ಅಲೆ, ತರಂಗ .

ತೆವರು - ಕಳೆ, ನೀಗು .

ತೊಡರನ್ನು ಕಾಲಲ್ಲಿ ಇಕ್ಕು .

ತೊಂಡಿಲ – ಬಾಸಿಗ

ತೊಡೆ – ನಿವಾರಿಸು, ಒರಸು,

ಇಲ್ಲವಾಗಿಸು ಅಳಿಸು, ಸೀಟು ತೊತ್ತಳದುಳಿ ಚೆನ್ನಾಗಿ ತುಳಿ,

ಮರ್ದನಮಾಡು

ದುಂಡುಮಂಡಲ, - ಸೈನ್ಯ ಮತ್ತು ದೇಶಾಂತರ .

ಮುಂದುಗ – ದುಗುಡ,ದುಃಖ ಕೋಟಲೆ .

ದ್ವಯಕಮಲ - ಎರಡೆಸಳಿನ ಚಕ್ರ

ದರಿದ್ರುದಡರ – ದಾರಿದ್ರ ದಶೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚ ಜ್ಞಾನೇಂದ್ರಿಯ

ದಸಿ - ಗೂಟ.

ದಿಗುದಂತಿ<ದಿಗ್ದಂತಿ, ದಿಗ್ಗಜ  ದಿಗುವಳಯ > ದಿಗ್ವಲಯ, ದಿಕ್ಕುಗಳು

ದಿಟ್ಟಿ – ದೃಷ್ಟಿ

ದ್ವೀಪದ್ವೀಪಾಂತರ - ಆಧಾರಾದಿ ಚಕ್ರಗಳು

ದೀಪ್ತಿ -ಬೆಳಕು

ದುರ್ಗ- ಕೋಟೆ

ದುರಿತಾಚಲಾಶನಿ – ಪಾಪವೆಂಬ ಬೆಟ್ಟಕ್ಕೆ ಸಿಡಿಲು, ವಿನಾಶಕ,

ವಿದಾರಕ

ದುರುಳೆ- ಧೂರ್ತ, ಘಾಟಿ .

ದೇವತರು - ದೇವದಾರು ಎಂಬ ವೃಕ್ಷ

ದೇವಾಂಗ – ರೇಷ್ಮೆಯ ಬಟ್ಟೆ, 1 ಉಡುಗೆ

ಧವಳಾರ – ಧವಳಾಗಾರ, ಸೌಧ, ಮಲಗುವ ಮನೆ

ನಚ್ಚಣಿ- ನರ್ತಕಿ

ನಡೆಯದ ನುಡಿಗಡಣ - ನಡೆಯಿಲ್ಲದ ಬರೀ ಮಾತು

ನನ್ನಿವಂತ – ಸತ್ಯವಂತ

ನಾಡಾಡಿ - ತುಚ್ಛ, ಕೀಳು ವ್ಯಕ್ತಿ

ನಾಡು ದೇಶ - ಈಡಾಪಿಂಗಳ

ನಾಣು-ಲಜ್ಜಾಸಾನ, ಯೋನಿ

ಲಜ್ಜೆಯನ್ನು,ಹುಟ್ಟಿಸುವಂಥ ಸ್ಥಾನ

ನಾರಿಯರೈವರು – ಪಂಚಶಕ್ತಿಗಳು - ಅಂತಃಕರಣ ಚತುಷ್ಟಯ ನಿಗಮ

ನಿಚ್ಚಟ – ನಿಶ್ಚಟ, ಚಟವಿಲ್ಲದ,

ನಿಚ್ಚಪ್ರಸಾ ॥

ನಿಜನಿವಾಸ - ಒಂದು ಕ್ಷೇತ್ರುದ ಹೆಸರು

ನಿಜೋಪದೇಶ

ನಿರ್ಣಯ- ತಿಳಿವಳಿಕೆ, ಜ್ಞಾನ

ನಿಧಾನ – ನಿಕ್ಷೇಪ, ನೆಲದಲ್ಲಿ ವೈಭಟ್ಟ ಹಣ, ಧನ

ನಿಬ್ಬಣ-ಉಪದೇಶ

ನಿಬ್ಬೆರಗು – ಅತಿಶಯವಾದ ಬೆರಗು .

ನಿರಂಜನ -ಜಂಗಮ

ನಿರವಯ - ಕೂಡುವುದು, ಐಕ್ಯ.ಸಮರಸ,

ನಿರಿ- ನೆರಿಗೆ

ನಿರುತ - ನಿಜ

ನಿಲ್ಲದ ದರೆ- ಚಿನ್‌ಪೃಥ್ವಿ

ನಿಲವು – ಸ್ಥಿತಿ, ಇರುವಿಕೆ

ನಿಶೂನ್ಯಲಿಂಗ - ಪರಬ್ರಹ್ಮ

ನಿಷ್ಠೆ - ಜಂಗಮಸ್ಥಲ

ನೀರ~ ಕ್ಷೀರ-ನೀರು ಹಾಲು

ನುಣ್ಣಿಸು- ನುಣ್ಣಗೆ ಮಾಡು  ಬಾಚು

ನುತಿ- ಹೊಗಳಿಕೆ

,ನೂಲು- ಬಟ್ಟೆ

ನೆರಹಬೇಕು - ಸಂಚಯನ ಮಾಡಬೇಕು

ನೆರಹು - ಸೇರಿಸು; ಪ್ರೇಮಿ, ಪ್ರೇಯಸಿಯರು ಕೂಡುವಂತ ಮಾಡು

ನೆರಹುಗುಡು- ಗುಂಪಿನಲ್ಲಿ ಸೇರು

ನೆರೆ - ಸಂಗಮಾಡು, ಕೂಡು, ಸಂಭೋಗಿಸು

ನೆಲದುರ್ಗದ ಭ್ರಾಂತದೇವಿ

ನೇಣು- ದಾರ, ಸೂತ್ರ

ನೇಹ - ಸ್ನೇಹ,

ನೊರಜು- ಸೊಳ್ಳೆಯಂತಹ ಕುದ್ರ ಜಂತು .

ನೋಟಕೂಟ -ದೃಷ್ಟಿಸಂಗಮ

ನೋತು- ನೋಂತು, ನೋಂಪಿ ಮಾಡಿ

ಪ್ರಕೃತಿ- ಆಸಂಸ್ಕೃತ ಚರ್ಯೆ .

ಪಂಚಕಲಶ

ಪಂಚಕಲೆ

ಪಂಚತನ್ಮಾತ್ರ

ಪಂಚತೀರ್ಥ - ನಡೆ, ನುಡಿ, ತನು, ಮನ, ಭಾವ

ಪಂಚಬ್ರಹ್ಮ

ಪಂಚಭೂತ – (೧) ಪೃಥ್ವಿ, - (೨) ಆಮ್ಲ, (೩) ತೇಜ, (೪) ವಾಯು, (i) ಆಕಾಶ

ಪಂಚಮುಖ - (೧) ಸದ್ಯೋಜಾತ, (೨) ವಾಮದೇವ, (೩)

ಅಘೋರ, (೪) ತತ್ಪುರುಷ (೫) |ಈಶಾನ

ಪಂಚಲಿಂಗ

ಪಂಚಲಿಂಗ ಪ್ರಕಾಶ -ಪಂಚಶಕ್ತಿ –

ಪಂಚಸಾದಾಖ್ಯ (೧) ಶಿವ, (೨)

ಅಮೂರ್ತ, (೩) ಮೂರ್ತ, (೪) ಕರ್ತೃ

(೫)ಕರ್ಮ

ಪಂಚಾಕ್ಷರಿ – ನಮಸ್ಶಿವಾಯ

ಪಂಚೀಕರಣ

ಪಟಲ - ಪೊರೆ

ಪಡುವಣದೇಶ

ಪತ್ರಿರಥ - ನವಿಲನ್ನು ವಾಹನವಾಗಿ ಉಳ್ಳ ಷಣ್ಮುಖ

ಪ್ರಪಂಚು- ಮಾಯಾ ಪಾಶ, ಮಾಯಾಜಾಲಳ

ಪರಮಾರ್ಥ - ಮೋಕ್ಷ

ಪರಮಾರಾಧ್ಯ – ಗುರು (?)

ಪರಶಿವಲಿಂಗ

ಪರಾಕಿ- ಯತಿ-ಪರಾರ್ಥ ಯತಿ

ಪರಾಕಿ

ಪರಾರ್ಥ- ಪರಾಕಿ (?)

ಪರಿ- ಕತ್ತರಿಸು

ಪರೆ- ಓಡು

ಪರಿ - ರೀತಿ

ಪರಿಣಾಮ - ಆನಂದ

ಪರಿಣಾಮಿ - ಸಂತುಷ್ಟ ಚಿತ್ತವುಳ್ಳ ವ್ಯಕ್ತಿ, ತೃಪ್ತ ಮನೋಭಾವ ದವನು

ಪರಿವನು - ಕತ್ತರಿಸುವನು

ಪರುಷ – ಸೋಕಿದುದನ್ನು ಚಿನ್ನ ಮಾಡುವ ಸ್ಪರ್ಶಮಣಿ . ಪಲ್ಲಟವಾಗು -ಇಲ್ಲವಾಗು, ಅಸ್ತವಾಗು

ಪಲ್ವಲ – ನೀರಿನ ಸಣ್ಣ ಗುಣಿ.

ನೀರಿನ ಗುಂಡಿ .

ಪ್ರಳಯ - ನಾಶ, ಸಾವು

ಪಳಿ > ಫಳಿ, ಬಟ್ಟೆ

ಪಳಿವು- ನಿಂದೆ, ಅಪಖ್ಯಾತಿ

ಪವಳ < ಹವಳ

ಪವಣಿಸು - ಪೋಣಿಸು .

ಪ್ರಸಂಗ -ಮಾತುಕತೆ, ಅನುಭವ.

ಪ್ರಸಾದ -ಪ್ರಸಾದಿ

ಪ್ರಸಾರ- ಅಂಗಡಿ, ಪ್ರದರ್ಶನಶಾಲೆ

ಪಾಯ್-ಪ್ರವೇಶಿಸು

ಪಾಶ (ಮೂವತ್ತೆರಡು )

ಪುತ್ಥಳಿ –ಗೊಂಬೆ

ಪುದುವಾಳ್ವರ್-ಸಹಬಾಳ್ವೆ ಮಾಡುವವರು .

ಪುಲ್ಲಮೊರಡಿ- ಹುಲ್ಲು ಬೆಳೆದ ಸಣ್ಣ ಗುಡ್ಡ

ಪೂಜೆ (ಸಗುಣ, ನಿರ್ಗುಣ)

ಪೂತ- ಪರಿಶುದ್ಧ

ಪೆರತೊಂದ -ಮತ್ತೊಂದನ್ನು, ಅನ್ಯವಿಷಯವನ್ನು

ಪೈಸರ – ಓಸರಿಸುವಿಕೆ, ತಪ್ಪುವಿಕೆ

ಫಣಿಮಣಿ - ನಾಗರಹಾವಿನ

ಹೆಡೆಯರತ್ನ

ಬಕುತಿ < ಭಕ್ತಿ

ಬಗ್ಗ < ವ್ಯಾಘ್ರ

ಬಟ್ಟೆ – ದಾರಿ

ಬಡಿಣದನ್ನ ಬಡಿಸಿದನ್ನ

ಬತ್ತಿಗಟ್ಟು - ಜಡೆಗಟ್ಟು

ಬಯಕೆ-ವಿಧಾನ, ಭೂಮಿಯಲ್ಲಿ ಬಚ್ಚಿಟ್ಟ ಧನ, ನಿಧಿ

ನಿಧಾನ

ಬಯಲಾಗಿ ಹೋಗು-ವ್ಯರ್ಥವಾಗಿಹೋಗು, ಹಾಳಾಗಿ ಹೋಗು, ಸಾಯಿ ತೀರು ಇಂಗು, ಪರಿಹಾರವಾಗು ಬಯಲು ಶೂನ್ಯ, ಕೈಗೆ ಸಿಗದ, ಅಮೂರ್ತ, ತುಚ್ಛ ಪದಾರ್ಥ,, (೧) ಶೂನ್ಯ, (೨) ನಿರಾಕಾರ .

ಬಯ್ಯಾಪುರ - ಬಯ್ಯಾಪುರದ ಮಹಾದೇವಿ.

ಬರಲುಗೊಳ್ – ಒಣಗು

ಬಲ್ಲಿದ -ಧನಿಕ  ಬಲಶಾಲಿ, ಬಲಿಷ್ಠ

ಬಲ್ಲಿದ x ಬಡವ

ಬಲಹು- ಶಕ್ತಿ, ಸಾಮರ್ಥ್ಯ

ಬಳಿಸಂದೆ -ಸನ್ನಿಹಿತಳಾದೆ

ಬಸಿರ ಕಟ್ಟು- ಹಠಯೋಗದ ಭಸ್ತಿ,ಮುಂತಾದ

ಅಂಗಶುದ್ದಿಯ ಸಾಧನೆಗಳನ್ನು ಮಾಡು

ಬರ್ಹಿ-ನವಿಲು

ಬಾಜಿಗಾರ-ಸ್ಪರ್ಧಾಳು

ಬಾಣ(ಅಂಕಿತನಾಮ)

ಬಾರದ ಭವ-ಬರಬಾರದ ಜನ್ಮ

ಬಾಲಬಾಡ್ಯ - ಬಾಲ್ಯಕಾಲದ ರೋಗಗಳು

ಬಾವನ್ನ - ಐವತ್ತೆರಡು.

ಬಿಟ್ಟಿಯಿಂದಲಿ ಕಟಕವ ಕಂಡ ತೆರ.

ಬವರ - ಯುದ್ದ ರಣ ; ಕಷ್ಟ

ಬಿಂದು-ತೇಜಸ್ಸು.

ಬಿನ್ನಪ- ವಿಜ್ಞಾಪನೆ

ಬಿರಿದನ್ನು ಕಟ್ಟು

ಬರಿಪಿಡಿ -ಬಿಗಿಯಾಗಿ ಹಿಡಿ

ಬೀಗು ಬಲಿತು ಬಿರಿ  ಪರಿಪೂರ್ಣವಾಗು

ಬೀಸರವಾಗು -ಮೀಸಲಳಿ, -

ಆಶುದ್ದವಾಗು

ಮೀಸಲುಮುರಿ

ಬೂತಾದೊಲ್ –ಕೊಲ್ಲುವ ದೆವ್ವವಾದಂತೆ

ಬೆಂಗೊಲ್-ಚಾವಟಿ

ಬರ್ಹಿ -ನವಿಲು

ಬಾರದ ಭವ - ಬರಬಾರದ ಜನ್ಮ

ಬೆಂಗೋಲ್-ಚಾವಟ

ಬಚ್ಚ -ಬೆಸುಗೆಯಾದ, ಏಕೀಭವಿಸಿದ ಒಂದಾದ

ಬೆಚ್ಚಂತಿರ್ದುದು – ಬೆಸುಗೆ - ಹಾಕಿದಂತೆ ಏಕವಾಗಿದ್ದಿತು.

ಬೆಚ್ಚರೆ – ಬೆಸುಗೆ ಹಾಕಿದರೆ ಆ ಬೆಸುಗೆ

ಬೆಚ್ಚು ಬೆರಸಲೊಡನೆ – ಬೆಸುಗೆ ಹಾಕಿದಂತೆ ಏಕೀಭವಿಸಲು ಬೆಡಗಿನ ವಚನ

ಬೆದೆಯಾಗು - ಹದವಾಗು

ಬೆರಡು - ತೀಟೆ, ಸ್ಪರ್ಶಸುಖಲಾಲಸೆ, ಬೆರಳಿಂದ ಕೆದಕಿ ನೋಡುವಿಕೆ, ಕಾಮವಿಕಾರ

ಬೆರಸು-ಒಳಗೊಳ್

ಬೆಳಲಕಾಯಿ - ಬೇಲದ ಕಾಯಿ

ಬೆಳರ್ವತ್ತಲೆ =ಬೆಳೆಯ ವೀಳೆಯದೆಲೆ

ಬೆಸಗೆಯ್ - ಆಜ್ಞಾಧಾರಕನಾಗಿರು, ಹೇಳಿದುದನ್ನು ಮಾಡು

ಬೆಸನ -ವ್ಯಸನ,

ಬೇಟ - ಪ್ರೀತಿ

ಬೇಸವ -ಕುದಿತ, ತಾಪ

ಬೋಳೆಯ - ಒಳ್ಳೆಯವ, ಸಾಧು

ಬೋಸರಿಗತನ -ಕೃತಕತೆ

ಭಕ್ತದೇಹಿಕ ದೇವ- ಭಕ್ತನ ದೇಹವೇ ತನ್ನ ದೇಹ ವಾಗಿರುವ ಶಿವನು.

ಭಕ್ತ - ಮಾಹೇಶ – ಪ್ರಸಾದಿ - ಪ್ರಾಣಲಿಂಗಿ-ಶರಣ-ಐಕ್ಯ

ಭಕ್ತ – ಯುಕ್ತ

ಭಕ್ತಿ – ಜ್ಞಾನ

ಭಕ್ತಿ – ಜ್ಞಾನ-ಪರಿಣಾಮ

ಭಕುತಿ > ಭಕ್ತಿ

ಭಗವ × ಮಾಸಕಬ್ಬೆ

ಭಟ್ಟಜಾಳ -ಹೊಗಳುಭಟ್ಟರ ಗುಂಪು

ಭಂಡು - ಅವಮಾನ, ಭವಭಂಗ

ಭಂಡ – ಅವಮಾನವನ್ನು

ಭ್ರಮರ - ದುಂಬಿ, ಜೇನುಹುಳು,

ಭವ-ಹುಟ್ಟು, ಜನ್ಮಾಂತರ

ಭವನಿಳಯ- ಸಂಸಾರಕೂಪ, ಸಂಸಾರದ ಜನ್ಮಭೂಮಿ ಭವಿ

ಭಾವಕೂಟ- ಭಾವಸಂಗಮ

ಭಾವತ್ರಯ –

ಭಾವ- ಮನದನ್ನೆ, ಪ್ರಿಯೆ

ಭಾಷೆಯ ಮೀಸಲ್ಲೆಡಿಸಿ ಪ್ರತಿಜ್ಞೆಯನ್ನು ಮುರಿದು, ಆಡಿದ ಮಾತನ್ನು

ಭಿನ್ನಯೋಗ~ ಅನ್ಯವಾದ ಯೋಗ, ಶಿವಯೋಗವಲ್ಲದ ಮಿಕ್ಕಿನ ಯೋಗ?

ಭಿನ್ನ ಸುಖ - ಶಿವಸುಖವಲ್ಲದ

ಇತರ ಸುಖ

ಭುಜಗ - ಹಾವು

ಭುಂಜಿಸು- ಊಟ ಮಾಡು

ಭೇದ-ವ್ಯತ್ಯಾಸ ರಹಸ್ಯ, ರೀತಿ

ಭೇದಿಸು-ಬೇರ್ಪಡಿಸು, ಒಳಹೊಕ್ಕು ನೋಡು, ತಿಳಿ ನೋಡು

ಭೈತ್ರ' (೧) ಹಡಗು (೨) ಪ್ರಾಣ

ಭೋಗ ಸ್ತ್ರೀ - ವೇಶ್ಯ, ಭೋಗಸ್ತ್ರೀ xಕುಲಸ್ತ್ರೀ

ಮಗುಳೆ- ಮತ್ತೆ

ಮಚ್ಚು –ಮೆಚ್ಚುಗೆ

ಮಡ- ಹೆಜ್ಜೆ

ಮುಡಮುರಿ- ಹಿಂತಿರುಗು

ಮಂಡಗೆ... ತಾರೆನು-ಗೌರವ

ತರುವೆನೇ ಹೊರತು ಅಪಕೀರ್ತಿ ತಾರೆನು

ಮಣಿಯಾರು -ಷಟ್ ಚಕ್ರಗಳು

ಮಂಡದುರುಬು -ಆತ್ಮತೇಜ ಮತ್ತೆ ಕೆಲಸ – ಇನ್ನುಳಿದವರನ್ನು

ಮದಕರಿ—ಮದಿಸಿದ ಆನ

ಮದಭರದ ಜವ್ವನದೊಡಲು

ಯೌವನೋನ್ಮಾದದ ದೇಹ

ಮದುವಳಿಗ- ವರ, ಗಂಡು

ಮದುವಳಿಗೆ - ವಧೂ, ಹೆಣ್ಣು

ಮನ್ನಣೆ - ಜ್ಞಾನ

ಮರಹು – ಮರವೆ, ಆಜ್ಞಾನ

ಮರುಜೀವಣ -ಸತ್ತವರನ್ನು

ಉಜ್ಜೀವಿಸುವ ಮೂಲಿಕೆ

ಮರೆದೊರಗ~ ನಿದ್ರೆ ಬಂದು ಮಲಗಿ

ಮಲೆ-ಅಹಂಕರಿಸು

ಮಲೆಗಳ ದೇವ- ಶ್ರೀಶೈಲದ

ಚೆನ್ನಮಲ್ಲಿಕಾರ್ಜುನ  ಮಹಾಲಿಂಗ

ಮಾರ್ಜಾಲ -ಬೆಕ್ಕು

ಮಾಟಕೂಟ - ಕ್ರಿಯಾಸಾಹಿತ್ಯ,

ಕ್ರಿಯಾಸಂಗಮ

ಮಾಡದ ಕಲಿತನ- ಕಾಯದಲ್ಲಿ

ತೊಡಗದ (ಉತ್ತರನ) ಪೌರುಷ

ಮಾಣ್ - ಪರಿಹಾರವಾಗು  ಅಪರಿಹಾರ್ಯ, ಅನಿವಾರ್ಯ, ಅಗತ್ಯ

ಮಾಣದು-

ಮಾಣಿಕದ ತೊಲೆ - ಸೋಹಂಭಾವ

ಮಾಣಿಸು -ನಿವಾರಿಸು

ಮಾಣುತಬಿಡು , ಸುಮ್ಮನಿರು

ಮಾತು- ಮಾಟ

ಮಾಮರ - ಮಾವಿನ ಮರ

ಮಾಯಿಕ- ಮಾಯೆಗೆ

ಸಂಬಂಧಿಸಿದ

ಮಾರಾಂಕ -ಪ್ರತಿಯೋಧ

ಮಾರುದರುವೆ - ಆಶಾರದರವು

ಮಾವ-ಪುರುಷ

ಮಾವತಿಗೆ- ಹಮ್ಮಿನ ಜೀವ

ಮಾವುಸಸ್ತಿ -ಮಾಂಸ ಮತ್ತು ಅಸ್ಥಿ

ಮಿಂಡಿತನ -ಹಮ್ಮು, ಬಿಮ್ಮು

ಮುಗಿಲು -ಆಕಾಶ

ಮುಡಿವಾಳ –ಒಂದು ವಿಧವಾದ ಸುವಾಸನೆಯ ಪತ್ರೆಯ ಗಿಡ ಮುಡುಹು -ಭುಜ(?)

ಮುಂತಾಗಿ -ಮುಂದುಮಾಡಿಕೊಂಡು,

ಪುರಸ್ಸರವಾಗಿ

ಮುತ್ತೈದೆ -ಭಕ್ತಿವನಿತೆ

ಮುಪ್ಪಿಲ್ಲದ ಸರ್ಪ- ಮೂಲಕುಂಡಲಿ

ಮುಕುತಿ-ಜ್ಞಾನ

ಮೆದ್ದಬಳಿಕ -ತಿಂದಮೇಢಲೆ

ಮೈದುನ- ಸಾದಾಖ್ಯ

ಮೆಲಿದು -ತಿಂದು

ಮೈದೊಡಿಗೆ - ಮೈಯ ಆಭರಣ

ಮೈಲಾರಿಯ ಮಲಿಗೊರವಿತಿ (?)

ಮೊಳೆದೋರು - ಮೊಳಕೆಯಾಗು

ಯತ್ರ ಜೀವಸ್ತತ್ರ ಶಿವರ ಎಲ್ಲಿ ಜೀವವೋ ಅಲ್ಲಿ ಶಿವನಿರುವ

ಯಂತ್ರವಾಹಕ ಸೂತ್ರಧಾರ

ಯತಿ – ಪರಾಕಿ

ಯತಿ •×ಪರಾರ್ಥ (=ಪರಾಕಿ)

ಯದ್ವವರೇ.. ಮಾಡಿದ ಶಿವಪುಜೆಯ ಫಲವಾಗಿ

ಶಿವಭಕ್ತನ ಮನೆಯ ಬಾಗಿಲಲ್ಲಿ ಪೂರ್ಣೇಂದುವದನೆಯರಾದ ನಾರಿಯರೂ ಮತ್ತಗಜಗಳೂ ವಾಯುವೇಗದ ಉತ್ತಮಾಶ್ವಗಳೂ ಒದಗಿನಿಲ್ಲುವವು

ಯೋಗ, ಸಂಬಂಧ

ಯೋಗಿ ×ಯೋಗಿಣಿ-

ಯೋಗಿಣಿ < ಯೋಗಿನಿ

ರಜ - ಚಿನ್ನ ಬೆರೆತ ಮಣ್ಣು ಅಥವಾ ಬೂದಿ

ರಜತಶೈಳ-ಕೈಲಾಸಪರ್ವತ

ರಂಡೆ-ಉಭಯಭಾವರಹಿತ

ರಪಣ –ಪಣ, ಆಟದಲ್ಲಿ ಪಣವಾಗಿ ಒಡ್ಡುವ ಧನಕನಕ . ರವಿ-ಸೂರ್ಯ

ರಾಶಿದೈವ -ಕ್ಷುದ್ರದೇವತಾಸಮೂಹ

ರುಚಿಸನ್ಯಾಸಿ

ರೇಖೆ -ಜೂಜಿಗೆ ಸಂಬಂಧಿಸಿದ

ಲಗುನಿಯಾಗಿ -ಶೀಘ್ರವಾಗಿ

ಲಂಬಿಸು -ಹಾರು (?)

ಲಲ್ಲೆವಾತು -ಮುದ್ದು ಮಾತು

ಲವಲವಿಕೆ –ಮೈನೇವರಿಸುವುದು

ಲಾಂಛನ – ವೇಷ

ಲಿಂಗ ಜಂಗಮ ಲಿಂಗಪ್ರಸಾದಿ

ಲಿಂಗಸ್ಥಲ(ತ್ರಿವಿಧ)ಲಿಂಗಾಂಗದ ಶುದ್ಧಿ ಲೀಲಾವಿಲಾಸ

ಲುಬ್ಧವಾಣಿ-ದುರಾಶೆಯ ಮಾತು

ಲೇಸು-ಶುಭ, ಪ್ರಶಸ್ತಿ

ವಜೀರ-ಮಂತ್ರಿ

ವರಚಕ್ರಿ -ಚಕ್ರಧಾರಿಯಾದ

ವ್ಯಸನ ವಿಷಯೋಪಭೋಗದ ಚಿಂತೆ

ಕಾಮಾತುರ

ವಾಯ-ವ್ಯರ್ಥ

ವಾಯು ಪ್ರಾಣಿ - ಅಲ್ಪಪ್ರಾಣಿ

ವಾರಣಾಸಿ - ಕಾಶೀಕ್ಷೇತ್ರ .

ವಾರಿಕಲ್ಲು-ನೀರುಕಲ್ಲು, ಮಂಜಿನಗಡ್ಡೆ

ವಿಂಧ್ಯ

ವಿಧಿ-ಸಾವು

ವಿವರಿಸು -ಬೇರ್ಪಡಿಸು, ಪ್ರತ್ಯೇಕಿಸು,

ಬೇರೆ ಯಾಗಿರಿಸು

ವಿಶಿಖ- ಬಾಣ

ವಿಹ್ವಳತೆ -ವ್ಯಾಕುಲ

ವೃಕ್ಷಾದ್ಭವಂತಿ -ವೃಕ್ಷದಿಂದ ಬೀಜಗಳಾಗುತ್ತವೆ. ಮತ್ತೆ ಆ ವ್ಯಕ್ತ ಬೀಜದಲ್ಲೇ ಅಡಕವಾಗುತ್ತದೆ ಹಾಗೆಯೇ ರುದ್ರಲೋಕದಿಂದ ಹೊರಬಂದ ಜೀವನದಲ್ಲಿ ರುದ್ರಲೋಕ ನಿಹಿತವಾಗಿದೆ

ವೇದ-ಶಾಸ್ತ್ರ-ಪುರಾಣ-ಆಗಮ-ತರ್ಕ

ವೇದಿಸು

ಶಯನಕ್ಕೆ -ಮಲಗುವುದಕ್ಕೆ

ಶ್ರವಣ x ಕಂತಿ

ಶಾಲಿ -ಭತ್ತ

ಶಿವ ಭಕ್ತ

ಶಿವಯೋಗಿ -

ಶಿಷ್ಯ

ಶಿವ[=ಜೇಡರ] ದಾಸಿಮಯ್ಯ

ಶಂಕರ ದಾಸಿಮಯ್ಯನಲ್ಲ

ಶಿವನಮ್ಮ

ಶಿವಾನುಭವ

ಶಿವೇತಿ ಮಂಗಲಂ ನಾಮ-ಶಿವ

ಎಂಬ ಮಂಗಳ ಕರವಾದ

ಹೆಸರು ಯಾರ ಮಾತಿನಲ್ಲಿ

ಪ್ರವರ್ತಿಸುವುದೋ ಅವರ

ಕೋಟ್ಯಾಂತರ ಮಹಾಪಾತಕಗಳು

ಶೀಘ್ರವಾಗಿ ಸುಟ್ಟು ಬೂದಿಯಾಗುತ್ತವೆ

ಶಿಶುಮಗಳು -ಶಿಷ್ಯಮಗಳು ಶಿಷ್ಯಳು

ಶ್ರೀಗಿರಿ

ಶ್ರೀಶೈಲ

ಶುನಕ -ನಾಯಿ

ಶುನಿ-ನಾಯಿ

ಶೈವ (ಜಾತಿ-ಅಜಾತಿ)

ಷಟ್ಕರ್ಮ-

(೧) ಯಜನ,(೨) ಯಾಜನ, (೩) ಅಧ್ಯಯನ,

ಅಧ್ಯಾಪನ, (೫) ದಾನ, (೬) ಪ್ರತಿಗ್ರಹ

ಷಟ್ಕರಣ ಪಂಚೇಂದ್ರಿಯ ×ಮನಸ್ಸು

ಷಟ್ಕರಣ (೧)ಭಕ್ತ, (೨)ಮಾಹೇಶ್ವರ, (೩) ಪ್ರಸಾದಿ, (೪) ಪ್ರಾಣಲಿಂಗಿ,(೫) ಶರಣ, (೬) ಐಕ್ಯ

ಷಡ್ಧಾತು

ಷದ್ಭಾವವಿಕಾರ (೧) ಅಸ್ತಿ, (೨)ಜಾಯತೇ, (೩) ವರ್ಧತೇ, (೪) ಪರಿಣಮತೇ, (೫) ಅಪಕ್ಷೀಯತೆ, (೬) ನಶ್ಯತೆ

ಷಡ್ವಿಧಭಕ್ತಿ

(೧) ಶ್ರದ್ಧಾ (೨)ನೈಷ್ಠಿಕ, (೩) ಸಾವಧಾನ, (೪) ಅನುಭಾವ, (೫) ಆನಂದ (೬)ಸಮರಸ

ಷಡ್ವಿಧಲಿಂಗ

(೧)ಆಚಾರ, (೨)ಗುರು, | (೩) ಶಿವ, (೪) ಜಂಗಮ, (೫) | ಪ್ರಸಾದ, (೬) ಮಹಾ

ಷಡ್ವಿಧಶಕ್ತಿ

(೧) ಕ್ರಿಯಾ, (೨) ಜ್ಞಾನ,೩)ಇಚ್ಛಾ ೪)ಆದಿ<ಪರಾ ೬)ಚಿತ್.

ಷಡ್ವಿಧಹಸ್ತ

(೧)ಭಾವ, (೨) ಜ್ಞಾನ (೩) ಮನ, (೪) ಬುದ್ಧಿ(೫

ಚಿತ್ತ, (೬) ಅಹಂಕಾರ

ಷಡೂರ್ಮಿ

(೧) ಕುಧೆ, (೨)ತೃರ (೩) ಹರ್ಷ, (೪) ವಿಷಾದ

(೫) ಜನನ, (೬) ಮರಣ

ಷಡ್ವಿದಚಕ್ರ

(೧) ಮೂಲಾಧಾರ, (1) ಸ್ವಾಧಿಷ್ಠಾನ, (೩) ಮಣಿಪೂರಕ, (೪) ಅನಾಹತ, (೫) ವಿಶುದ್ಧ ೬)ಆಜ್ಞಾ

ಷೋಡಶೋಪಚಾರ

|ಸಕಲ-ನಿಷ್ಕಲ

ಸಕೀಲ

ಸಕೀಲಸಂಬಂಧ

ಸಕುತಿ-ಶಕ್ತಿ

ಸಜ್ಜನ (೧) ಸತಿ, (೨) ಸೌಜನ್ಯವುಳ್ಳ

ವ್ಯಕ್ತಿ ೫೬ ಸಟೆ -ಸುಳ್ಳು, ಅಸತ್ಯ

ಸಡಿಲಿ -ಬಿಟ್ಟು ಸಡಿಲವಾಗಿ ಕಳಚಿ

ಸಂದಣಿ -ಗುಂಪು ಗಲಭೆ

ಸಂಧು-ಭಿನ್ನವಾದ

ಸಪ್ತವ್ಯಸನ

ಸಂಪಾದನೆ-ವಿಮರ್ಶೆ,ವಿಚಾರ

ಸಂಪುಟ –ಪೆಟ್ಟಿ ಲಿಂಗದ ಕರಡಿಗೆ(?)

ಸಬಳ - ಒಂದು ಆಯುಧ ವಿಶೇಷ

ಸಮಗಾರ -ಚರ್ಮ ಹದಮಾಡುವವ, ಕಟುಗ

ಸಮಯಪ್ರಸಾದಿ

ಸಮಾಧಿಸ್ಥಲ

ಸ್ವಯಪ್ರಸಾದಿ -ಪ್ರಸಾದಸ್ವರೂಪಿ

ಸ್ವಯಲಿಂಗ -ಸ್ವಯಂಲಿಂಗ, ಲಿಂಗಸ್ವರೂಪಿ, ಸಾಕ್ಷಾತ್ ಶಿವ, ಸ್ಥಾವರಲಿಂಗ ಸ್ವಯವಪ್ಪ (೧)ಸ್ವಯಂಭುವಾದ, ತನಗೆ ತಾನೇ ಆದ (೨)ಸರಿ ಯಾದ ರುಜುವಾದ

ಸ್ವಯವಾಗು-ಅಡಗು, ಅಂತರ್ಲೀನನಾಗು

ನಿಗೂಢವಾಗಿರು ಪರಿಪೂರ್ಣ ವಾಗು, ತಾನೇ ತಾನಾಗು ಸಯಿದಾನ- ಸಾಮಗ್ರಿ<ಸಂವಿಧಾನ

ಸರವರ <ಸರೋವರ

ಸವರವು ನಾಲ್ಕು ಕರಣಚತುಷ್ಟಯ

ಸರವೆತ್ತಿ -ಸ್ವರವೆತ್ತಿ, ಪಂಚಮದಲ್ಲಿ ಧ್ವನಿ ಯೇರಿಸಿ

ಸಲ್ಲು-ಹೋಗು, ಅಡಿಯಿಡು

ಸಲೆ-ಚೆನ್ನಾಗಿ, ಹೊಂದಿಕೆಯಾಗಿ

ಸವಣ : ಸವಣಿ

ಸವಣ • ಕಂತಿ

ಸವಣ • ಶ್ರವಣ ಜೈನಸನ್ಯಾಸಿ

ಸವಣಿ x ಶ್ರವಣಿ ಜೈನಸನ್ಯಾಸಿನಿ

ಸವರು-ಸಮಮಾಡು

ಸವಿಗಲೆ -ಸುಖ, ಮಧುರಭಾವ

ಸಹಜಮಿಥುನರೂಪ -ಅರ್ಧನಾರೀಶ್ವರ

ಸಹಭವ-ಸಹೋದರ

ಸಾಕಾದ ಮತ್ತೆ ಸಾಕಾದಮೇಲೆ ಳ ಸಾರೆ -ಹತ್ತಿರ ಸಾವಯ-ನಿರವಯ

ಸ್ಥಾವರಲಿಂಗ <

ಕಾವ ವಿದ್ಯೆ-ಸಾಯವ ಅವಿದ್ಯೆ

ಸಿತಗ -ಧೂರ್ತ

ಸಿತಗೆ-ಜಾರೆ, ವ್ಯಭಿಚಾರಿಣಿ

ಸೀರೆ -ಬಟ್ಟೆ

ಸ್ತ್ರೀಸನ್ಯಾಸಿ

ಸುಂಕಿಗ -ಸುಂಕ ವಸೂಲು

ಮಾಡುವ ಸೇವಕ

ಸುಕೃತಿ – ಪುಣ್ಯ

ಸುಚಿತ್ರ -ನಿರ್ಮಲ, ತಿಳಿಯಾದ, ಒಳ್ಳೆಯ ಚಿತ್ತದಂತೆ ಪ್ರಸನ್ನವಾದ

ಸುತ್ತೇಳುಕೇರಿ- ಸಪ್ತಧಾತು

ಸುಧಾನಿಧಿ -ಸಮುದ್ರ

ಸುಪ್ರಸಿದ್ಧ - ಪ್ರಸಿದ್ಧವೆಂಬ ಪ್ರಸಾದ

ಸುಯಿ-ನಿಟ್ಟುಸಿರುಬಿಡು

ಸುಯಿಧಾನ -ವ್ರತ (?)

ಸುರ -ಹೆಂಡ

ಸುಲಿಪಲ್ಲ-ಶುಭ್ರವಾದ ಹಲ್ಲುಗಳ

ಸೂಕರ -ಹಂದಿ

ಸೂಕ್ಷ್ಮ -ಸ್ಥೂಲ

ಸೂಸದಮನ -ನಿಶ್ಚಲಮನ

ಸೆಜ್ಜೆ-ಇಷ್ಟಲಿಂಗವಿರುವ ಕರಡಿಗೆ

<ಶಾಯ್ಯಾ

< ಸರ ಕೊರಳ ನರ

ಸ್ನೇಹ (೧) ಎಳೆ, ನೂಲು (೨)

ಸ್ನೇಹಭಾವ

ಸ್ನೇಹಕೂಟ-ಸ್ನೇಹಸಾಹಿತ್ಯ, ಸ್ನೇಹಭಾವ, ಸ್ನೇಹಸಂಗಮ

ಸೈಧಾನ <ಸಯಿಧಾನ < ಸಂವಿಧಾನ

-ಸಂಭಾರ ಸಾಮಗ್ರಿ

ಸೈವೆರಗಾಗು - ಆಶ್ಚರ್ಯದಿಂದ

ಸ್ತಂಭೀಭೂತವಾಗು

ಸೊನ್ನಲಪುರದ ಲಕ್ಷ್ಮೀದೇವಿ

ಹಗೆ-ಶತ್ರು

ಹಂಗಿತಿ -ಹಂಗಿನವಳು ಪರಾಧೀನೆ

ಹಗೆಹ' –ಭೂಮಿಯೊಳಗೆ ಧಾನ್ಯವನ್ನು

ಶೇಖರಿಸಿಡುವ ಕಣಜ ಹಗನ್

ಹಂಡಿಗತನ -ಕೊಳಕುತನ.

ಅನಾಚಾರ,

ಹಡೆ -ಪಡೆ, ಹೊಂದು

ಹತ್ತರೊಳಗೆ ಹನ್ನೊಂದಾಗಿ ಏಕೀಭವಿಸಿ, ಒಂದಾಗಿ ಬೆರೆತು

ಹತ್ತು ಹತ್ತು ಐದು -ಪಂಚವಿಂಶತಿ ತತ್ವಭೇದ

ಹತ್ತೆಸಾರ್ದುದ -ಹತ್ತಿರಬಂದುದನ್ನು

ಹತ್ತುಮಂದಿ ದಶವಾಯು

ಹಂದರ -ಚಪ್ಪರ

ಹದನು-ಪದನು, ಸ್ಥಿತಿ

ಹದುಳ -ಕ್ಷೇಮ

ಹದುಳಿಗ -ಯೋಗ

ಹಂದೆ - ಹೇಡಿ

, ಕಲಿ x

ಹಂದೆ

ಹಬ್ಬೆ – ಬೆತ್ತ

ಹರದ ವ್ಯಾಪಾರಿ, ಸೆಟ್ಟಿ

ಹರವಸ -ಪರವಶ, ಮೋಹಕ

ಹರಿ-ಪ್ರವರ್ತಿಸು, ವ್ಯವಹರಿಸ

ಹರುಗೋಲು-ದೇಹ ಹಳಹಳನ

ಹಳಚು -ಆಘಾತಿಸು

ಹಳ್ಳ -ಪ್ರಪಾತ,

ಹಸನಿಸು-ನಗಿಸು, ಹಾಸ್ಯಮಾಡು

ಹಸೆ –ಪೀಠ

ಹಾದರವನಾಡು - ಪರ(ಮ)ಪುರುಷನೊಡನೆ ಸುಖಸು

ಹಾರ -ಇಚ್ಚಿಸನು, ಆಶಿಸನು

ಹಾರು -ಇಚ್ಚಿಸು, ಆಸೆಪಡು

ಹಾರೈಸು ಆಶಪಡು

ಹಾವುಗೆ -ಪಾದುಕೆ, ಪಾದರಕ್ಷೆ

ಹಾಸು -ಹಾಸಿಗೆ

ಹಿಂಗದೆ ಮೋಹ ತೆರಹಿಲ್ಲದಿರ್ದ -ಅಕ್ಷಯವಾದ -

ಪ್ರೇಮಸಾಂದ್ರತೆ ಯಲ್ಲಿದ್ದ (?)

ಹಿಡಿವಡೆದ -ಬಂಧನಕ್ಕೆ ಸಿಕ್ಕಿದ

ಹಿಸಿ –ಹಿಸುಕು

ಹೀಹಂದಿ -ಹೀನವಾದ ಹಂದಿ

ಹುಟ್ಟುಕೆತ್ತು- ಮರವನ್ನು ಕೆತ್ತಿ ನುಣ್ಣಗೆ | ಮಾಡು

ಹುತಹವ –ಬೆಂಕಿ

ಹುರಿಗುಂದು -ನುಲಿ ತಿಳಿಯುವುದು

ಹುಲುಮೊರಡಿ- ಕಲ್ಲುಡ್ಡ

ಹುಸಿ -ಸುಳ್ಳು

ಹೇಮಗಿರಿ -ದಾಸೋಹಂ ಭಾವ ಹೊಗಬಾರದು ಪ್ರವೇಶಿಸಲಸಾಧ್ಯ

ಹೊದ್ದ- ಹೊಂದನು

ಹೊದಕುಳಿಗೊಳ್ -ತಳಮಳಗೊಳ್ಳು

ಹೊದ್ದು- ಹೊಂದು

ಹೊನ್ನಾವರಿಕೆ –ತಂಗಡಿ ಹೂವಿನ ಗಿಡ

ಹೊಡೆ ಮೊಡೆ, ಹೊಡೆತ ?

ಹೊಯ್ದು -ಕುಟ್ಟಿ

ಹೊರೆ ರಕ್ಷಿಸು, ಕಾಪಾಡು

ಹೊಲ್ಲೆಹ-ಕಷ್ಟಕಾರ್ಪಣ್ಯ, ಲೇಸು ×

ಹೊಲ್ಲೆಹ

ಹೊಳಲ ಸುಂಕಿಗ

ಹೊಳಲು -ಪಟ್ಟಣ, ಊರು>

ಪೊಳಲ್

ಹೊಳೆಯ ಬರವು -ಭವದುರಿತ

ಹೊಸೆ ಕಡೆ, ಮಥನ ಮಾಡು

ಹೋರಿ -ಹೋರಾಡಿ

ಹೋರು-ಬಿಲ

ಸ್ವಾತ್ಮಾನಂ -ತನ್ನನ್ನಾಗಲಿ ಇತರರನ್ನಾಗಲಿ ನೋಡಿ ನೋಡಿ ಯಾರು ಭೇದ ಬುದ್ಧಿ ಮಾಡುವುದಿಲ್ಲವೋ ಎಲ್ಲವೂ ಚಿಜ್ಯೋತಿಯೇ' ಎಂದು ಯಾರು ಕಾಣುವರೋ ಅವರೇ ಕಣ್ಣುಳ್ಳವ (ದಾರ್ಶನಿಕ)ರು